ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ:ಸಿ7[3]ಪ್ರಾಶಿಅ:ಖಾ.ಶಾ.ಮಾ.ನ:06:2022-23 ದಿನಾಂಕ:29ನೇ ಜುಲೈ 2022

***: ಸುತ್ತೋಲೆ :***

ವಿಷಯ: ಖಾಸಗಿ ಅನುದಾನಿತ / ಅನುದಾನರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಸಲು ದಿನಾಂಕವನ್ನು ವಿಸ್ತರಿಸಿರುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ:23-5-2022
2) ಸರ್ಕಾರ ಪತ್ರ ಸಂಖ್ಯೆ:ಇಪಿ.254.ಪಿಜಿಸಿ.2022, ದಿನಾಂಕ:29-6-2022
3) ಈ ಕಛೇರಿ ಪತ್ರದ ಸಂಖ್ಯೆ:ಸಿ7(3)ಪ್ರಾಶಿಅ.ಖಾ.ಶಾ.ಮಾ.ನ.1/2021-22 ದಿನಾಂಕ:30-6-2022

*********

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಪತ್ರದಲ್ಲಿ 2022-23ನೇ ಸಾಲಿನಲ್ಲಿ ಮುಕ್ತಾಯವಾಗುವ ಶಾಲಾ ಮಾನ್ಯತೆಗಳನ್ನು ನವೀಕರಿಸಿಕೊಳ್ಳಲು ಹಾಗೂ ಹೊಸದಾಗಿ ನೋಂದಣಿ ಪಡೆದ ಶಾಲೆಗಳು ಪ್ರಥಮ ಮಾನ್ಯತೆ ಪಡೆಯಲು ಅರ್ಜಿಗಳನ್ನು ಆಹ್ವಾನಿಸಿದ್ದು ಸಂಬಂಧಿಸಿದ ಆಡಳಿತ ಮಂಡಳೀಗಳು ಅರ್ಜಿ ಸಲ್ಲಿಸಲು ದಿನಾಂಕ:27-6-2022 ರಂದು ಅಂತಿಮ ದಿನಾಂಕವೆಂದು ನಿಗಧಿಪಡಿಸಿ ಮುಕ್ತಾಯಗೊಳಿಸಲಾಗಿತ್ತು. ಆದರೆ ಉಲ್ಲೇಖ (2)ರಲ್ಲಿ ಸರ್ಕಾರವು ನೀಡಿದ ನಿರ್ದೇಶನದಂತೆ ನಿಗಧಿಪಡಿಸಿರುವ ದಾಖಲೆಗಳನ್ನು ಸಲ್ಲಿಸಲು ಸಾಧ್ಯವಾಗದಿರುವ ಹಿನ್ನಲೆಯಲ್ಲಿ ಮುಚ್ಚಳಿಕೆಯನ್ನು ನೀಡಿ ಅರ್ಜಿ ಸಲ್ಲಿಸಲು ಅವಕಾಶವಾಗುವಂತೆ ಉಲ್ಲೇಖ (3)ರಲ್ಲಿ ದಿನಾಂಕ:28-7-2022ರವರೆಗೆ ವಿಸ್ತರಿಸಲಾಗಿತ್ತು.

ಈ ಅವಧಿಯಲ್ಲಿ ಕೆಲವು ಶಾಲೆಗಳ ಆಡಳಿತ ಮಂಡಳಿಗಳು ಸರಿಯಾದ ದಾಖಲೆಗಳನ್ನು ದಾಖಲಿಸದೆ ತಿರಸ್ಕೃತಗೊಂಡಿದ್ದು ಹಾಗೂ ರೋಲ್ ಬ್ಯಾಕ್ (Roll Back) ಸಮಯದಲ್ಲಿ ಮಾಹಿತಿಯನ್ನು ನಿಗಧಿತ ಕಾಲಾವಧಿಯಲ್ಲಿ ಸಲ್ಲಿಸದೆ ಇರುವುದರಿಂದ ಅಂತಹ ಅರ್ಜಿಗಳು ಉಪನಿರ್ದೇಶಕರಿಗೆ ಹಿಂತಿರುಗಿ ಬಂದಿದ್ದು ಅಂತಹ ಅರ್ಜಿಗಳನ್ನು ಸಹಾ ಪುನರ್ ಪರಿಶೀಲಿಸಬೇಕಾಗಿರುವ ಹಿನ್ನಲೆಯಲ್ಲಿ ಹಾಗೂ 2021-22 ಮತ್ತು 2022-23ನೇ ಸಾಲಿನ ಮಾನ್ಯತೆ/ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಸದಿರುವ ಶಾಲೆಗಳ ಆಡಳಿತ ಮಂಡಳಿಗಳು ಸಹ ಅಂತಿಮವಾಗಿ ಅರ್ಜಿ ಸಲ್ಲಿಸಲು ದಿನಾಂಕ:12-8-2022 ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದೆ.

ಈ ಅವಧಿಯಲ್ಲಿ ಮಾನ್ಯತೆ ಅವಧಿ ಮುಕ್ತಾಯವಾಗಿರುವ ಹಾಗೂ ಹೊಸದಾಗಿ ನೋಂದಣಿ ಪಡೆದ ಶಾಲೆಗಳು ಸಹ ಮಾನ್ಯತೆ ಪಡೆಯಲು ಅರ್ಜಿ ಸಲ್ಲಿಸಲು ಸೂಚಿಸಿದೆ. ಒಂದು ವೇಳೆ ಮಾನ್ಯತೆಗೆ ಅರ್ಜಿ ಸಲ್ಲಿಸಿ ಮಾನ್ಯತೆ ಪಡೆಯದೆ ಇದ್ದಲ್ಲಿ ಅಂತಹ ಶಾಲೆಗೆ ಆರ್.ಟಿ.ಇ ಶುಲ್ಕ ಮರುಪಾವತಿ ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಹಾಜರುಪಡಿಸಲು ಸಾಧ್ಯವಾಗದೆ ಇರುವುದರಿಂದ ಎಲ್ಲಾ ಶಾಲೆಗಳು ಕಡ್ಡಾಯವಾಗಿ ಮಾನ್ಯತೆಯನ್ನು ನಿಯಮಾನುಸಾರ ಹೊಂದಿರತಕ್ಕದ್ದು ಇಲ್ಲವಾದಲ್ಲಿ ಅಂತಹ ಶಾಲೆಗಳನ್ನು ಅನಧಿಕೃತ ಶಾಲೆಗಳೆಂದು ಪರಿಗಣಿಸಿ ಕ್ರಮವಹಿಸಲಾಗುವುದು

***ಆಯುಕ್ತರು,***
ಸಾರ್ವಜನಿಕ ಶಿಕ್ಷಣ ಇಲಾಖೆ.

*ಇವರಿಗೆ:*

***01.*** ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.

***02.*** ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ. [ಇವರು ಎಲ್ಲಾ ಖಾಸಗಿ ಅನುದಾನರಹಿತ ಆಡಳಿತ ಮಂಡಳಿ ಹಾಗೂ ಅನುದಾನರಹಿತ ಶಾಲಾ ಮುಖ್ಯಸ್ಥರುಗಳಿಗೆ ಸುತ್ತೋಲೆಯನ್ನು ತಲುಪಿಸುವುದು]

***ಪ್ರತಿಯನ್ನು ಮಾಹಿತಿಗಾಗಿ.***

***01.*** ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ವಿಭಾಗ.

***02.*** ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.

***03.*** ಹಿರಿಯ ಸಹಾಯಕ ನಿರ್ದೇಶಕರು, ಎಸ್.ಎ.ಟಿ.ಎಸ್., ವಿಭಾಗ, ಇವರು ತಂತ್ರಾಂಶವನ್ನು ಬಿಡುಗಡೆ ಮಾಡುವುದು ಹಾಗೂ ತಂತ್ರಾಂಶವು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ನಿಗಾವಹಿಸುವುದು.

***04.*** ಕಛೇರಿ ಪ್ರತಿ.